– ಓದುವುದಕ್ಕೆ, ಬರೆಯುವುದಕ್ಕೆ. ಮನೆಯಲ್ಲಿ ಲ್ಯಾಪ್ ಟಾಪುಗಳು, ಡೆಸ್ಕ್ ಟಾಪ್ ಬೇರೆ, ವೈ ಫೈ, ಇತ್ಯಾದಿ, ಇತ್ಯಾದಿ. ಮದುವೆಯಾದ ಹೊಸತಿನಲ್ಲಿ ತಾನು ಹಿಂದೆ ನಿಯೋಜಿಸಿದ್ದ ಎರಡು ಕಥೆಗಳನ್ನು ಬರೆದ. ಎರಡೂ ಸ್ವೀಕೃತವಾದವು. ಹೆಮ್ಮೆ ಪಟ್ಟುಕೊಂಡ. ಸೇರಾ ಕೂಡ ಭೇಷ್ ಎಂದಳು. “ಮುಂದೇನು ಬರೀತೀರಿ ಕವಿಗಳೇ?” ಎಂದು ಹಾಸ್ಯಮಾಡುತ್ತಿದ್ದಳು. ತನ್ನ ಖರ್ಚಿಗೆ ತನ್ನದೇ ಹಣ ಬೇಡವೇ? ಅವಳನ್ನು ಕೇಳುವುದೇ? ಕಾಲೇಜಿನಲ್ಲಿ ಹೋಗಿ ತಾನಿದ್ದ ವಿಭಾಗದಲ್ಲಿಯೇ ಟ್ಯೂಟರ್ ಆದ. ವಿದ್ಯಾರ್ಥಿಗಳು ಬರೆದ ಕಥೆ, ಕವಿತೆಗಳನ್ನು ಓದಿ ಸಲಹೆ, ಸೂಚನೆಗಳನ್ನು ನೀಡುತ್ತಿದ್ದ. ಅವೆಲ್ಲಾ ಕೇವಲ ಅಭ್ಯಾಸ ಬರಹಗಳಾಗಿ ಕಂಡವು. ಓದಿ ನಗುತ್ತಿದ್ದ.

ತನ್ನ ಕಲ್ಪನೆ, ಬುದ್ಧಿಶಕ್ತಿಗಳನ್ನು ಉಪಯೋಗಿಸಿಕೊಂಡು ಮತ್ತೆರಡು ಕಥೆಗಳನ್ನು ಬರೆದ. ಸಂಪಾದಕರಿಬ್ಬರು “ಇವು ಚರ್ವಿತ ಚರ್ವಣ” ಎಂದು ತಿರಸ್ಕರಿಸಿದರು. ಏನನ್ನಾದರೂ ಬರೆಯಬೇಕು ಎಂದು ಕುಳಿತರೆ ಏನೂ ಹೊಳೆಯದಾಯಿತು. ಹಿಂದೆ ತಾನು ಎತ್ತಿಕೊಂಡಿದ್ದ ಸಮಸ್ಯೆಗಳು ಈಗ ಗೌಣ ಎನಿಸಿದವು. ಬದುಕು ಸುಖಕರವಾಯಿತು. ಸವಾಲು, ಘರ್ಷಣೆ, ತುಮುಲ ಯಾವುವೂ ಇಲ್ಲವಾದವು. ಎಲ್ಲಾ ಹಸನಾಗಿರುವ ಬದುಕನ್ನು ಕುರಿತು ಬರೆಯುವುದೇನಿದೆ? ಒಂದು ವರ್ಷ ಬರೆದದ್ದೇ ಇಲ್ಲ.

ತಾನು ಸಕ್ರಿಯವಾಗಿ ಹಿಂದೆ ಪಾಲ್ಗೊಂಡಿದ್ದ ಲೇಖಕ ಸಂಘದ ಹಿರಿಯರು ನೀಡಿದ್ದ ಸಲಹೆ ಜ್ಞಾಪಕಕ್ಕೆ ಸದಾ ಬರುತ್ತಿತ್ತು. “ಜೀವಂತ ಲೇಖಕನಾಗಬೇಕಾದರೆ ಪ್ರತಿನಿತ್ಯ ಎರಡು ಸಾವಿರ ಪದಗಳಷ್ಟನ್ನು ಬರೆಯಲೇ ಬೇಕು. ಇಲ್ಲದಿದ್ದರೆ ತುಕ್ಕು ಹಿಡಿದು ಹೋಗುತ್ತೀಯ.” ದಿನಕ್ಕೆ ಎರಡು ಪದವೂ ಹೊಳೆಯುತ್ತಿರಲಿಲ್ಲ. ತನ್ನನ್ನು ತಾನೇ ಶಪಿಸಿಕೊಂಡ.

ಇವನ್ನೆಲ್ಲಾ ಸೇರಾ ಗಮನಿಸದೆ ಇರುತ್ತಾಳೆಯೇ? ಒಮ್ಮೆ ಹೇಳಿದ್ದೂ ಆಯಿತು. “ನಿನಗೆ ಎಲ್ಲಾ ಸೌಕರ್ಯ ಸವಲತ್ತುಗಳೂ ಇವೆ. ಇನ್ನಾವ ಕೊರತೆ ನಿನಗೆ? ಕೂತು ಬರಿ”. ಕೆಲವು ದಿನಗಳ ನಂತರ ಮತ್ತೊಂದು ಸಲಹೆ ನೀಡಿದಳು. “ನಿನಗೆ ಬರಹ ಹೊರಡದೇ ಹೋದರೆ ಚಿಂತೆ ಇಲ್ಲ. ನೀನು ಹೂಂ ಅಂದರೆ ಡ್ಯಾಡಿಗೆ ಹೇಳುತ್ತೇನೆ. ನೀನು ನಮ್ಮ ಯಾವುದಾದರೂ ಕಚೇರಿಯನ್ನು ನೋಡಿಕೋ. ವರ್ಷಕ್ಕೆ ಒಂದಿಷ್ಟು ಸಂಬಳ ತೆಗೆದುಕೋ.”

‘ಇಷ್ಟು ದಿನ ಇವರಪ್ಪನ ಅಳಿಯ ಆಗಿದ್ದೆ. ಇನ್ನು ಅವನ ಜವಾನ ಆಗಬೇಕಾ?’ ಮಾತನಾಡಲಿಲ್ಲ ಡೇವಿಡ್. ಮನೆಯಲ್ಲಿ ಬರೆಯುವುದು ಅಸಾಧ್ಯ. ಹೊರಗಡೆ ಆಗಬಹುದೇನೋ – ಯೋಚಿಸಿದ. ಅಂದಿನಿಂದ ತನ್ನ ಕಾರ್ಯಕ್ರಮವನ್ನು ಬದಲಾಯಿಸಿಕೊಂಡ. ಸೇರಾ ತನ್ನ ಕಚೇರಿಗೆ ಹೊರಟ ತಕ್ಷಣ ದೂರದ ಕೆಫೆಗೆ ಹೋಗಿ ಅಲ್ಲಿ ಬರೆಯಲೆತ್ನಿಸಿದ. ನಿರೀಕ್ಷಿತ ಫಲ ಲಭಿಸಲಿಲ್ಲ. ಬದಲಾಗಿ ಮನ ಬಂದಷ್ಟು ಕಾಫಿಯನ್ನು ಹೀರುವ ಅವಕಾಶ ದೊರೆಯಿತು.

ಕಾಫಿಯಾದ ಮೇಲೆ ಸ್ವಲ್ಪ ಮಂಪರು ಬಂದಂತಾಗಿ ಹಾಗೆಯೇ ತೂಕಡಿಸಿದ. ಕಣ್ಣು ಬಿಟ್ಟಾಗ ವೈಟರ್ ಬಂದು “ಈಗ ಮಾಡಿದ ಪ್ಯಾನ್ ಕೇಕ್ ತರಲಾ?” ಎಂದು ಕೇಳಿದಳು. ಬಂದ ಪ್ಯಾನ್ ಕೇಕನ್ನು ಮೇಪಲ್ ಸಿರಪ್ ಮತ್ತು ಸ್ಟ್ರಾಬೆರೀ ಹಣ್ಣಿನೊಡನೆ ಸವಿಯುತ್ತಾ ಇದ್ದಂತೆ ಓರ್ವ ಮಹಿಳೆ ಅವನ ಕಣ್ಣಿಗೆ ಬಿದ್ದಳು. ಅವಳೊಡನೆ ಒಬ್ಬ ಹುಡುಗ ಮತ್ತು ಅವಳ ಕಂಕುಳಲ್ಲಿ ಒಂದು ಹೆಣ್ಣುಮಗು. ಬಂದವಳೇ ಮುಂದೆ ಕುಳಿತಿದ್ದ ಮ್ಯಾನೇಜರನನ್ನು ಕೇಳಿಕೊಂಡಳು – “ನನ್ನ ಮಗ ಟಾಯ್ಲೆಟ್ಟಿಗೆ ಹೋಗಬೇಕು. ಪರವಾಗಿಲ್ಲವೇ” ಮ್ಯಾನೇಜರ್ “ಇಲ್ಲ” ಎನ್ನುವಂತಿಲ್ಲ, ಒಪ್ಪಿಕೊಂಡ. ಅವರು ಹೊರಬಂದಾಗ ಆ ಮಹಿಳೆಯನ್ನು ಹತ್ತಿರದಿಂದ ನೋಡುವಂತಾಯಿತು. ಕಳಪೆ ಉಡುಪು, ಬಾಡಿದ ಮುಖ. ಬಡವಿ ಎಂದುಕೊಂಡ ಡೇವಿಡ್. ತಾಯಿ ಮಗ ಇವನ ಟೇಬಲ್ಲಿನ ಹತ್ತಿರವೇ